13

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ

ದಿನಾಂಕ : DATE : 21/5/2020

# ಕೊರೋನಾ ಸಮಸ್ಯೆ ಸದ್ಯಕ್ಕೆ ದೂರವಾಗಲ್ಲ

## ಆನ್‌ಲೈನ್ ಸಂವಾದದಲಿ ರಾಜ್ಯಸಭಾ ಸದಸ್ಯರಾದ ರಾಜೀವ್ ಚಂದ್ರಶೇಖರ್ ಅಭಿಪ್ರಾಯ

21/5/20

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊರೋನಾ ವೈರಸ್ ಸಮಸ್ಯೆ ಸದ್ಯದ ಮಟ್ಟಿಗೆ ದೂರವಾಗುವುದಿಲ್ಲ ಎಂದು ರಾಜ್ಯಸಭಾ ಸಂಸದ ರಾಜೀವ್ ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

'ಇಂಡಿಯಾ ಕೋ-ವಿನ್ ಆ್ಯಕ್ಷನ್ ನೆಟ್‌ವರ್ಕ್ ಕರ್ನಾಟಕ ಟೀಮ್' ಸಂಸ್ಥೆ ಆಯೋಜಿಸಿದ್ದ ಆನ್‌ಲೈನ್ ಸಂವಾದವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕರೋನಾ ಸಾಂಕ್ರಾಮಿಕವು ಜಗತ್ತು ಎದುರಿಸುತ್ತಿರುವ ಅತಿದೊಡ್ಡ ಸವಾಲು ಆಗಿದ್ದು, ಭಾರತ ಮತ್ತು ಪ್ರಪಂಚದ ಇತರೆ ದೇಶಗಳಿಗೆ ಸಾಕಷ್ಟು ಹೊಡೆತ ನೀಡಿದೆ. ಆರ್ಥಿಕತೆ, ಸಮಾಜ ಮತ್ತು ಸಮುದಾಯದ ಮೇಲೆ ಹೆಚ್ಚಿನ ದುಷ್ಪರಿಣಾಮ ಬೀರುತ್ತಿದೆ. ಸದ್ಯದ ಮಟ್ಟಿಗೆ ಕೊರೋನಾ ವೈರಸ್ ಸಮಸ್ಯೆ ದೂರವಾಗುವುದಿಲ್ಲ. ಇನ್ನು 12-18 ತಿಂಗಳವರೆಗೆ ಕೊರೋನಾ ಜಗತ್ತನ್ನು ಕಾಡಲಿದೆ. ಹೀಗಾಗಿ, ಇದರೊಂದಿಗೆ ಬದುಕಲು ಜೀವನ ಶೈಲಿ ಬದಲಾಯಿಸಿಕೊಳ್ಳಬೇಕಾದ ಅಗತ್ಯವಿದೆ ಎಂದರು.



ಕೊರೋನಾ ಸೋಂಕು ಸೃಷ್ಟಿಸಿದ ಆರ್ಥಿಕ ಮುಗ್ಗಟ್ಟಿನಿಂದ ದುರ್ಬಲ ವರ್ಗದವರೇ ಹೆಚ್ಚಿನ ಪ್ರಮಾಣದಲ್ಲಿ ಸಮಸ್ಯೆ ಎದುರಿಸುತ್ತಿದ್ದಾರೆ. ಅದರಲ್ಲೂ ವಲಸೆ ಕಾರ್ಮಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಅವರ ಪರಿಸ್ಥಿತಿಯನ್ನು ಸರ್ಕಾರ ಹೇಗೆ ಸುಧಾರಿಸಲಿದೆ ಎಂಬುದನ್ನು ಕಾದುನೋಡಬೇಕಿದೆ. ಆದರೆ, ಸ್ವಯಂ ಸೇವಾ ಸಂಘಗಳು ಲಾಕ್‌ಡೌನ್ ಅವಧಿಯಲ್ಲಿ ರಾಜ್ಯಾದ್ಯಂತ ನಿರ್ಗತಿಕರ ಪರವಾಗಿ ಕೆಲಸ ಮಾಡಿದೆ ಎಂದು ಶ್ಲಾಘಿಸಿದರು.

ರಾಜೀವ್ ಚಂದ್ರಶೇಖರ್ ಅವರ ರಾಜಕೀಯ ಕಾರ್ಯದರ್ಶಿ ಪ್ರಸಾದ್ ನಾಯರ್ ಅವರ ಜೊತೆಗೂಡಿ ಇಂಡಿಯಾ ಕೋ-ವಿನ್ ಆ್ಯಕ್ಷನ್ ನೆಟ್‌ವರ್ಕ್ ಕರ್ನಾಟಕ ಟೀಮ್‌ನ ರಾಜ್ಯ ಸಂಚಾಲಕರಾದ ಅನುಪಮಾ ಶರ್ಮಾ ಈ ಸಂವಾದ ಆಯೋಜಿಸಿದ್ದರು. ರೈತರ, ಶೋಷಿತಕ್ಕೆ ಒಳಗಾದ ಸಮುದಾಯಗಳ, ಬುಡಕಟ್ಟು ಜನರ ಕಲ್ಯಾಣ, ಕಲೆ, ಸಂಸ್ಕೃತಿ, ಶಿಕ್ಷಣ, ಆರೋಗ್ಯ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಶ್ರಮಿಸುತ್ತಿರುವ ಅನೇಕ ಸ್ವಯಂ ಸೇವಾ ಸಂಘಗಳು ಸಂವಾದದಲ್ಲಿ ಭಾಗವಹಿಸಿದ್ದವು. ತಮ್ಮ ಕಾಳಜಿ ಹಾಗೂ ಸಲಹೆಗಳನ್ನು ರಾಜೀವ್ ಚಂದ್ರಶೇಖರ್ ಅವರೊಂದಿಗೆ ಹಂಚಿಕೊಂಡರು.